# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 11 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ |
| ಉತ್ತರಿಸುವ ದಿನಾಂಕ | : | 19-12-2022 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಗ್ನಿಶಾಮಕ ಠಾಣೆಗಳನ್ನು ತೆರೆಯಲು ಇರುವ ನಿಯಮಗಳು/ಮಾನದಂಡಗಳೇನು; ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿರುವ ಅಗ್ನಿಶಾಮಕ ಠಾಣೆಗಳು, ವಾಹನಗಳು ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು) | ಸ್ಟ್ಯಾಂಡಿಗ್ ಫೈರ್ ಅಡ್ವೈಸರಿ ಸಮಿತಿಯ ನಿರ್ಣಯದನ್ವಯ ಅಗ್ನಿಶಾಮಕ ಠಾಣೆಯ ಸ್ಥಾಪನೆಗೆ ಮುಖ್ಯವಾಗಿ ಜನಸಂಖ್ಯೆ, ಪ್ರತಿಕ್ರಿಯಿಸುವ ಸಮಯ ಮತ್ತು ಅಪಾಯದ ವಿಶ್ಲೇಷಣೆಯನ್ನು ಆಧರಿಸಿ, ಅಪಾಯದ ವಿಶ್ಲೇಷಣೆಯ ಅನುಪಸ್ಥಿತಿಯಲ್ಲಿ ನಿರ್ದಿಷ್ಟವಾದ ಸಲಕರಣೆ ಅವಶ್ಯಕತೆ, ಟ್ರಾಫಿಕ್ ದಟ್ಟಣೆಯ ಜೊತೆಗೆ ಜನಸಂಖ್ಯೆ ಮತ್ತು ಪ್ರದೇಶವನ್ನು ಆಧರಿಸಿ, ಅಗ್ನಿಶಾಮಕ ಠಾಣೆ, ಮತ್ತು ಅಗ್ನಿಶಮನ, ಉಪಕರಣಗಳ ಅಗತ್ಯತೆಯನ್ನು ನಿರ್ದಿಷ್ಟಪಡಿಸಲಾಗಿದೆ.<br>1. ನಗರ ವ್ಯಾಪ್ತಿಯ ಪ್ರತಿ 10 ಚ.ಕಿ.ಮೀ ಗೆ 01 ಅಗ್ನಿಶಾಮಕ ಠಾಣೆ ಇರಬೇಕಾಗಿರುತ್ತದೆ.<br>2. ಗ್ರಾಮೀಣ ಪ್ರದೇಶದ ವ್ಯಾಪ್ತಿಯ ಪ್ರತಿ 50 ಚ.ಕಿ.ಮೀ ಗೆ 01 ಅಗ್ನಿಶಾಮಕ ಠಾಣೆ ಇರಬೇಕು.<br>3. ಪ್ರತಿ 50,000 ಜನಸಂಖ್ಯೆಗೆ 01 ಜಲವಾಹನ ಹೊಂದಿರಬೇಕು.<br>ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿರುವ ಅಗ್ನಿಶಾಮಕ ಠಾಣೆಗಳು, ವಾಹನಗಳು ಹಾಗೂ ಸಿಬ್ಬಂದಿಗಳ ವಿವರಗಳು ಈ ಕೆಳಗಿನಂತಿದೆ. |

**ಬಳ್ಳಾರಿ ಜಿಲ್ಲೆ**

| ಕ್ರ. ಸಂ | ಅಗ್ನಿಶಾಮಕ ಠಾಣೆ | ವಾಹನಗಳು | ಅಧಿಕಾರಿ/ಸಿಬ್ಬಂದಿ |
|---|---|---|---|
| 1 | ಬಳ್ಳಾರಿ | 06 | 49 |
| 2 | ಸಂಡೂರು | 03 | 21 |
| 3 | ಶಿರಗುಪ್ಪ | 04 | 23 |
| 4 | ಕುರುಗೋಡು | 02 | 23 |

**ವಿಜಯನಗರ ಜಿಲ್ಲೆ**

| ಕ್ರ. ಸಂ | ಅಗ್ನಿಶಾಮಕ ಠಾಣೆ | ವಾಹನಗಳು | ಅಧಿಕಾರಿ/ಸಿಬ್ಬಂದಿ |
|---|---|---|---|
| 1 | ಹೊಸಪೇಟೆ | 05 | 35 |
| 2 | ಹೂವಿನಹಡಗಲಿ | 03 | 19 |
| 3 | ಹರಪ್ಪನಹಳ್ಳಿ | 02 | 24 |
| 4 | ಹಗರಿಬೊಮ್ಮನಹಳ್ಳಿ | 03 | 22 |
| 5 | ಕೊಟ್ಟೂರು | 01 | 21 |
| 6 | ಕೂಡ್ಲಗಿ | 03 | 21 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಬಳ್ಳಾರಿ ನಗರದ ಬೆಂಗಳೂರು ರಸ್ತೆಯಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿ ಅಗ್ನಿಶಾಮಕ ಠಾಣೆ ಅಥವಾ ಅಗ್ನಿಶಾಮಕದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳು, ಪೊಲೀಸ್ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಪತ್ರ ವ್ಯವಹಾರಗಳನ್ನು ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; | - ಬಂದಿಲ್ಲಾ -<br>ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳು, ಪೊಲೀಸ್ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಇವರುಗಳು ಸರ್ಕಾರದೊಂದಿಗೆ ಯಾವುದೇ ಪತ್ರ ವ್ಯವಹಾರ ನಡೆಸಿರುವುದಿಲ್ಲ. |

...2

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಈ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 60 ಕ್ಕೂ ಹೆಚ್ಚು ಹತ್ತಿ ಉಡುಪುಗಳ ಕೈಗಾರಿಕೆಗಳಿದ್ದು, ಇಲ್ಲಿ ಈ ಹಿಂದೆ ಹಲವಾರು ಬಾರಿ ಅಗ್ನಿ ಅವಘಡಗಳು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕೈಗಾರಿಕಾ ಪ್ರದೇಶಕ್ಕೆ ತುರ್ತಾಗಿ ಒಂದು ಅಗ್ನಿಶಾಮಕ ಠಾಣೆಯನ್ನು ತೆರೆಯಲು ಸರ್ಕಾರದ ಕ್ರಮಗಳೇನು; ಯಾವ ಕಾಲಮಿತಿಯಲ್ಲಿ ಕ್ರಮವಹಿಸಲಾಗುವುದು? (ಮಾಹಿತಿ ನೀಡುವುದು) | - ಬಂದಿಲ್ಲ -<br><br>- ಉದ್ಭವಿಸುವುದಿಲ್ಲ - |

**ಸಂಖ್ಯೆ: ಒಇ 299 ಎಸ್‌ಎಫ್‌ಬಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು